ಶ್ರೀ ಎಂ. ಎಸ್. ಕೃಷ್ಣನ್.—ಕೊಳಚೆ ಪ್ರದೇಶವನ್ನು ತಡೆಗಟ್ಟುವುದರಲ್ಲಿ ಸಹಕಾರ ವಿಫಲವಾಗಿದೆ. ಹಂತ ಹಂತವಾಗಿ ಅವರನ್ನು ಬೇರೆ ಕಡೆಗೆ ವರ್ಗಾಯಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇವೊತ್ತು ಪತ್ರಿಕೆಯಲ್ಲಿ ಈ ವಿಚಾರ ಬಂದಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದಕ್ಕೆ ಹೊರಟಿದ್ದಾರೆ. ಮನೆಗಳನ್ನು ಕೆಡವಿ, ಅವರಿಗೆ ಸ್ಥಳ ತೋರಿಸದೆ ಇದನ್ನು ನಿರ್ಮೂಲನ ಮಾಡುವಂತಹ ನಿದರ್ಶನಗಳು ಇವತ್ತಿನ, ಹಾಗೂ ನಿನ್ನೆಯ ಪತ್ರಿಕೆಯಲ್ಲಿ ಬಂದಿವೆ. ಅದನ್ನು ತಡೆಗಟ್ಟಿ ಅದಕ್ಕೆ ಬದಲು ಬೇರೆ ಕಡೆ ಅವರಿಗೆ ಜಾಗವನ್ನು ಕೊಟ್ಟು ಸರಿಯಾದಂತಹ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಹೊಸದಾಗಿ ಕೊಳಚೆ ಪ್ರದೇಶಗಳು ತಲೆ ಎತ್ತುವುದಕ್ಕೆ ಬಿಡುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ನಾನೂ ಕೂಡ ಹೇಳಿದ್ದೇನೆ. ೧೦-೧೫ ವರ್ಷಗಳಿಂದ ಖಾಯಂ ಆಗಿ ಕೊಳಚೆ ಪ್ರದೇಶಗಳಲ್ಲಿರತಕ್ಕಂತಹವರನ್ನು ಆ ಸ್ಥಳದಿಂದ ಬಿಡಿಸುವ ಸಮಯದಲ್ಲಿ ಅವರಿಗೆ ಬೇರೆ ಜಾಗಗಳನ್ನು ಕೊಟ್ಟು ಆ ಜಾಗದಿಂದ ಅವರನ್ನು ಬಿಡಿಸುತ್ತೇವೆ. ಈ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಕೆಲವು ಕಡೆ ಮಾಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಒಕ್ಕಲಿಗರ ಸಂಘದ ಎದುರುಗಡೆ ಬುಟ್ಟಿಗಳನ್ನು ಮಾರುತ್ತಿದ್ದರು. ಈಗ ಎರಡು ವರ್ಷದಿಂದ ಅಲ್ಲಿ ಆಗಿರುವಷ್ಟು ಕೊಳಚೆ ಇನ್ನು ಎಲ್ಲೂ ಇಲ್ಲ. ನೀವು ಆ ಕಡೆ ಓಡಾಡಿಯೇ ಇಲ್ಲವೇ ? ಮಾನ್ಯ ದೇವೇಗೌಡರು ಒಕ್ಕಲಿಗರ ಸ್ಥಳದಲ್ಲಾಗುತ್ತಿರುವ ಅನಾಹುತ, ನಿಮಗಾಗಲೀ ಇಲ್ಲವೇ ಕಾರ್ಪೊರೇಷನ್‌ಗಾಗಲೀ ಗಮನಕ್ಕೆ ಬಂದಿಲ್ಲವೇ ? ಅದು ಘೋಷಿತ ಪ್ರದೇಶವೋ, ಅಘೋಷಿತ ಪ್ರದೇಶವೋ ?

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಇಂತಹ ಕೊಳಚೆ ಪ್ರದೇಶಗಳಿಂದ ಸುತ್ತ ಮುತ್ತಲಿನ ಜನರಿಗೆ ತೊಂದರೆಯಾಗುತ್ತದೆನ್ನುವುದನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಆದರೆ ಅವರನ್ನು ಸ್ಥಳಾಂತರ ಮಾಡಬೇಕಾದರೆ ಬೇರೆ ಜಾಗಗಳನ್ನು ಗೊತ್ತುಮಾಡಿ ಅವರನ್ನು ಆ ಜಾಗಕ್ಕೆ ಕಳುಹಿಸತಕ್ಕಂತಹ ವ್ಯವಸ್ಥೆ ಮಾಡಬೇಕಾಗುತ್ತದೆ. ಇದು ನಿನ್ನೆ ಮೊನ್ನೆ ಬಂದದ್ದು ಅಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಪ್ರಶ್ನೋತ್ತರಕ್ಕೆ ಎಷ್ಟು ಸಮಯ ಕೊಡಬೇಕು ? ಸಾಧ್ಯವಿಲ್ಲ ತಾವು ದಯವಿಟ್ಟು ಕುಳಿತುಕೊಳ್ಳಿ.

## ಉಳ್ಳಾಲ ಕ್ಷೇತ್ರದಲ್ಲಿ ನಳದ ನೀರಿನ ಕೆಲಸ

೫೮ (೮೫) ಶ್ರೀ ಬಿ. ಎ. ಇದಿನಬ್ಬ (ಉಳ್ಳಾಲ).—ಮಾನ್ಯ ಗ್ರಾಮಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಉಳ್ಳಾಲ, ಕೋಟೆಕಾರು, ಬಜಾಲ್ ಈ ಮೂರು ನಳದ ನೀರಿನ ಯೋಜನೆ ಮಂಜೂರಾತಿ ಆಗಿದ್ದು ಇವುಗಳ ಕೆಲಸ ಈಗ ಯಾವ ಹಂತದಲ್ಲಿದೆ ?

ಆ) ಈ ಕೆಲಸಗಳು ಮಂದಗತಿಯಿಂದ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಆದಷ್ಟು ಶೀಘ್ರವಾಗಿ ಈ ಕೆಲಸಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು).—

| | | | |
|---|---|---|---|
| ಅ) | ಗ್ರಾಮ ಉಳ್ಳಾಲ | ಮಂಜೂರಾದ ವರ್ಷ ೧೯೮೫/೮೬ | ಹಂತ ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಸಲಾಗಿದ್ದು ತಾಂತ್ರಿಕ ಮಂಜೂರಾತಿ ನೀಡಿ ಕಾರ್ಯಗತಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. |

| | | |
|---|---|---|
| ಕೋಟೆಕಾರು | ೧೯೮೫/೮೬ | ಈವರೆಗೆ ಈ ಯೋಜನೆಗೆ ಜಲಮೂಲ ಇತ್ಯರ್ಥವಾಗಿದ್ದು ಮೇಲ್ಪಟ್ಟದ ನೀರಿನ ತೊಟ್ಟಿಯ ಕಾಮಗಾರಿ ಕೆಲಸವು ಪ್ರಗತಿಯಲ್ಲಿದೆ. |
| ಬಜಾಲ್ | ೧೯೮೫/೮೬ | ಈ ಯೋಜನೆಯ ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಸಲಾಗಿದ್ದು ತಾಂತ್ರಿಕ ಮಂಜೂರಾತಿ ನೀಡಿ ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

ಅ) ತ್ವರಿತಪಡಿಸಲು ಆದೇಶ ನೀಡಲಾಗಿದೆ.

ಇ) ಈ ಯೋಜನೆಗಳನ್ನು ಆದಷ್ಟು ಜಾಗ್ರತೆಯಾಗಿ ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಿ. ಎಂ. ಇದ್ದಿನಬ್ಬ.—ಉಳ್ಳಾಲ, ಕೋಟೆಕರ್ ಬಜಾಲ್, ಈ ಮೂರು ಕಡೆಗೆ ನಲ್ಲಿ ನೀರಿನ ಯೋಜನೆಯನ್ನು ತಾವು ಮಂಜೂರು ನೀಡಿ ಕೆಲಸವನ್ನು ಮುಂದುವರಿಸಿದ್ದೀರಿ ಬಹಳ ಸಂತೋಷ, ಈ ಕಾರ್ಯಕ್ರಮ ಮಂದಗತಿಯಿಂದ ಸಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ, ಸರಿಯಾಗಿ ಕಂಟ್ರಾಕ್ಟ್ ಸಿಕ್ಕುವುದಿಲ್ಲ ಸಿಕ್ಕಿದ ಕಂಟ್ರಾಕ್ಟರ್ ತಪ್ಪಿಸಿಕೊಳ್ಳುತ್ತಾರೆ ಎಂದು ನೆಪ ಹೇಳುತ್ತಾರೆ, ಈ ಕಂಟ್ರಾಕ್ಟರ್ ಸರಿಯಾಗಿ ಸಿಕ್ಕಿದರೆ ೧೯೮೬ರ ಅವಧಿಯೊಳಗೆ ಈ ಕೆಲಸ ಪೂರೈಸಿ ಕುಡಿಯುವ ನೀರಿನ ಬರ ತಪ್ಪುವ ಹಾಗೆ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಈ ಪ್ರದೇಶಗಳಿಗೆ ಹೋಗಿದ್ದೇನೆ. ನಮ್ಮ ಅಧಿಕಾರಿಗಳೂ ಹೇಳುತ್ತಿದ್ದಾರೆ. ಕಂಟ್ರಾಕ್ಟರ್ ಸಿಗದಿರತಕ್ಕಂಥಾದ್ದು ಕೂಡ ವಾಸ್ತವಿಕ. ಕಂಟ್ರಾಕ್ಟರ್ ಸಿಕ್ಕಿದ್ದರೆ ಇಲಾಖೆಯ ಮುಖಾಂತರವಾಗಿ ಕೆಲಸ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ಇದಕ್ಕೆ ಈ ವರ್ಷ ಬಜೆಟ್‌ನಲ್ಲಿ ಹಣ ಮಂಜೂರು ಮಾಡಿದ್ದೇವೆ ಅದನ್ನು ಪೂರ್ಣ ವೆಚ್ಚ ಮಾಡಿ ಎಂದು ಆದೇಶ ಕೊಟ್ಟಿದ್ದೇನೆ.

ಶ್ರೀ ಬಿ. ಎಂ. ಇದ್ದಿನಬ್ಬ.—ಇದರ ಸಾಮಾನು, ನಲ್ಲಿ, ಮುಂತಾದವು ಬರಲಿಲ್ಲವೆಂದು ಹೇಳುತ್ತಾರೆ ಅದು ನಿಜವೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಏನೇನು ಅವಶ್ಯಕ ವಸ್ತುಗಳು ಬೇಕೋ ಅದನ್ನು ಒದಗಿಸಿ ಕೊಡುತ್ತೇನೆ.

ಶ್ರೀ (೧೯೨) ಅಧ್ಯಕ್ಷರು.—ಸಮಾಜ ಕಲ್ಯಾಣ ಇಲಾಖೆಗೆ ಹೋಗಿದೆ, ಅಲ್ಲಿಂದ ಉತ್ತರ ಬಂದ ಮೇಲೆ ತಮಗೆ ಕೊಡಿಸುತ್ತೇನೆ.

## ಬೆಳ್ತಂಗಡಿ ನೀರು ಸರಬರಾಜು ಯೋಜನೆಯ ಕಾರ್ಯದ ಪ್ರಗತಿಯ ಬಗ್ಗೆ

೬೦ (೩೪೯) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಈ ಹಿಂದೆ ಪುರಸಭೆಯಾಗಿದ್ದ ಬೆಳ್ತಂಗಡಿ ಈಗ ಮಂಡಲ ಪಂಚಾಯತಿಯಾಗಿರುವುದರಿಂದ ಈ ನೀರು ಸರಬರಾಜು ಯೋಜನೆ ಕಾರ್ಯಗತಗೊಳಿಸುವ ಕೆಲಸ ಯಾವ ಹಂತದಲ್ಲಿದೆ?

(ಆ) ಇದಕ್ಕೆ ಸರಕಾರದಿಂದ ಮಂಜೂರಾದ ಹಣವೆಷ್ಟು ? ಹಾಗೂ ವೆಚ್ಚಮಾಡಿದ ಹಣದ ಮೊತ್ತವೆಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

(ಅ) ಪ್ರಾರಂಭ ಮಾಡಲಾಗಿದ್ದು ಪ್ರಗತಿಯಲ್ಲಿವೆ.

(ಆ) ೧೯೮೬-೮೭ರ ಸಾಲಿಗೆ ಜಲಮಂಡಳಿಯ ಆಯವ್ಯಯದಲ್ಲಿ ನಿಗದಿಮಾಡಿರುವ ಹಣ ರೂ. ೮೦೦ ಲಕ್ಷಗಳು. ೧೯೮೬ರ ಜೂನ್‌ವರೆಗೆ ರೂ. ೦.೬೪ ಲಕ್ಷ ರೂಪಾಯಿಗಳು ವೆಚ್ಚವಾಗಿರುತ್ತವೆ.